ಇ) *ಸರಾಸರಿ ಒಂದು ನಗರ ಬಸ್ಸಿನ ವಾರ್ಷಿಕ ನಷ್ಟವೆಷ್ಟು? ಅದರಂತೆ ಸರಾಸರಿ ಒಂದು ಹಳ್ಳಿ ಬಸ್ಸಿನ ವಾರ್ಷಿಕ ನಷ್ಟವೆಷ್ಟು?*

ಈ) *ಕೆ.ಎಸ್.ಆರ್.ಟಿ.ಸಿ. ಯನ್ನು ಜಿಲ್ಲಾ ಮಟ್ಟದಲ್ಲಿ ವಿಕೇಂದ್ರೀಕರಣ ಮಾಡಿ ನಷ್ಟ ತಪ್ಪಿಸಲು ಪ್ರಯತ್ನಮಾಡಲಾಗುವುದೆ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 12-12-1992ಕ್ಕೆ 9361 ವಾಹನಗಳ ಚಾಲ್ತಿಯಲ್ಲಿ 8596 ನಾದುರಸ್ತಿಯಲ್ಲಿ 649.

ಆ) ಪ್ರಸ್ತುತ ಜನಸಂಖ್ಯೆಯ ಅನುಪಾತಕ್ಕನುಗುಣವಾಗಿ ನಗರದಲ್ಲಿ 2588 ಜನಕ್ಕೆ ಒಂದರಂತೆ (ಬಿಟಿಎಸ್) ಮತ್ತು ಹಳ್ಳಿಗಳಿಗೆ 4891 ಜನಕ್ಕೆ ಒಂದರಂತೆ ಬಸ್ಸುಗಳನ್ನು ಓಡಿಸಲಾಗುವುದು.

ಇ)1991-92ರಲ್ಲಿ ಸರಾಸರಿ ನಗರ ಬಸ್ಸಿಗೆ ರೂ. 1,57,000 ಹಳ್ಳಿ ಬಸ್ಸಿಗೆ ರೂ. 126. ವಾರ್ಷಿಕ ನಷ್ಟವಾಗಿರುತ್ತದೆ.

ಈ) ಪರಿಶೀಲಿಸಲಾಗುತ್ತಿದೆ.

ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರ್ ಹುದ್ದೆಗಳ ಸಂಖ್ಯೆ

503 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಸಹಾಯಕ ಸಂಚಾರ ವ್ಯವಸ್ಥಾಪಕ ಹುದ್ದೆಗಳ ಸಂಖ್ಯೆ*

ಆ) *ಅದರಲ್ಲಿ ಅಕ್ಟೋಬರ್-ನವೆಂಬರ್ 92ರಲ್ಲಿ ಹೊಸದಾಗಿ ಎಷ್ಟು ಹುದ್ದೆಗಳನ್ನು ಸೃಷ್ಟಿಸಲಾಗಿದೆ?*

ಇ) *ಈ ಹುದ್ದೆಗಳನ್ನು ಸೃಷ್ಟಿಸಲು ಕಾರಣಗಳು?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 57.

ಆ) ಮೂರು ತಿಂಗಳ ಅವಧಿಯವರೆಗೆ ತಾತ್ಕಾಲಿಕವಾಗಿ 8 ಹೊಸ ಹುದ್ದೆಗಳನ್ನು ಸೃಷ್ಟಿಸಲಾಗಿದೆ.

ಇ) ಆರು ಸಹಾಯಕ ಸಂಚಾರ ಅಧೀಕ್ಷಕರ ಹುದ್ದೆಗಳನ್ನು ಹಿಂದಕ್ಕೆ ತೆಗೆದುಕೊಂಡು, ಆರು ಸಹಾಯಕ ಸಂಚಾರ ವ್ಯವಸ್ಥಾಪಕ ಹುದ್ದೆಗಳನ್ನು ಹೊಸದಾಗಿ ಪ್ರಾರಂಭವಾದ ಬೆಂಗಳೂರು ನಗರ ಸಾರಿಗೆ, ಉತ್ತರ ವಿಭಾಗ, ಬೆಂಗಳೂರು ಗ್ರಾಮಾಂತರ ವಿಭಾಗ, ದಾವಣಗೆರೆ ಬಾಗಲಕೋಟೆ, ಗದಗ್ ಮತ್ತು ಬೀದರ್ ವಿಭಾಗಗಳಿಗೆ ಮಾರ್ಗತನಿಖಾ ಚಟುವಟಿಕೆಗಳ ಸಲುವಾಗಿ ಹಾಗೂ ಮೈಸೂರು ಮತ್ತು ಶಿವಮೊಗ್ಗ ಬಸ್ ನಿಲ್ದಾಣಗಳಿಗೆ ಒಂದೊಂದು ಸಹಾಯಕ ಸಂಚಾರ ವ್ಯವಸ್ಥಾಪಕ ಹುದ್ದೆಗಳನ್ನು ಹೊಸದಾಗಿ ಸೃಷ್ಟಿಸಲಾಗಿದೆ.